**ಸಾಕ್ಷಿಯನ್ನು ದಿನಾಂಕಃ 15-03-2025 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದ ಪರ ಶ್ರೀ ಪಿ.ಎಮ್.ವಿ ವಕೀಲರಿಂದ.**

ಈ ದಾವೆಯನ್ನು ಅಂಬಾದಾಸ ಪಡತಾರೆ ರವರು ಮಹೇಂದ್ರ ಪಡಿಯಾರ ರವರ ಮೇಲೆ ಮಾಡಿರುತ್ತಾರೆ. ದಾವಾ ಆಸ್ತಿ ತಮ್ಮದು ಇರುತ್ತದೆ ಎಂದು ಅಂಬಾದಾಸ ರವರು ಈ ದಾವೆಯನ್ನು ಹಾಕಿರುತ್ತಾರೆ. ನಿವೇನಾದರೂ ಪಡಿಯಾರ ಮತ್ತು ಅಂಬಾದಾಸ ಇವರ ನಡುವೆ ಆದ ವ್ಯವಹಾರದಲ್ಲಿ ಭಾಗಿ ಆಗಿದ್ದಿರಾ ಎಂದರೆ ಸಾಕ್ಷಿಯು ಖರೀದಿ ಪತ್ರ ಆಗುವ ಸಮಯದಲ್ಲಿ ನನಗೆ ಮಹೇಂದ್ರ ಪಡಿಯಾರ ರವರು ಕರೆಸಿದ್ದರು ಎಂದು ನುಡಿಯುತ್ತಾರೆ. ಆಗ ಮಹೇಂದ್ರ ಪಡಿಯಾರ ರವರು ಅಂಬಾದಾಸ ಪಡತಾರೆ ಇವರಿಂದ ಮನೆಯನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರದಲ್ಲಿ ಮಹೇಂದ್ರ ಪಡಿಯಾರ ಇವರು ಮನೆಯನ್ನು ರೂ.6,20,000/- ಗಳಿಗೆ ಖರೀದಿ ಮಾಡಿರುತ್ತಾರೆ ಎಂದು ಬರೆದಿದ್ದು ಇರುತ್ತದೆ. ನಾನು ಸದರಿ ಖರೀದಿ ಪತ್ರದ ಮೇಲೆ ಸಾಕ್ಷಿದಾರ ಅಂತಾ ಸಹಿ ಮಾಡಿರುತ್ತೇನೆ. ಖರೀದಿ ಪತ್ರದಲ್ಲಿ ಆಸ್ತಿಯ ಕಬ್ಜಾವನ್ನು ಯಾವಾಗ ಕೊಡುತ್ತಾರೆ ಎಂದು ಬರೆದಿರುವುದು ನನಗೆ ನೆನಪಿರುವುದಿಲ್ಲ. ಸಾಕ್ಷಿ ಮುಂದುವರೆದು ಆಸ್ತಿಯ ಸ್ವಾಧೀನತೆಯನ್ನು ಖರೀದಿ ಪತ್ರ ಆದ 04 ದಿನಗಳ ನಂತರ ಕೊಡುತ್ತೇನೆ ಅಂತಾ ಅಂಬಾದಾಸ ಪಡತಾರೆ ಇವರು ಹೇಳಿದ್ದರು ಎಂದು ನುಡಿಯುತ್ತಾರೆ. ಅಂಬಾದಾಸ ಪಡತಾರೆ ಇಲ್ಲಿಯವರೆಗೆ ಸದರಿ ಆಸ್ತಿಯ ಸ್ವಾಧೀನತೆಯನ್ನು ಮಹೇಂದ್ರ ಪಡಿಯಾರ ರವರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿ ಸುಶೀಲಾಬಾಯಿ ಮತ್ತು ಅವಳ ಗಂಡನಾದ ಅಂಬಾದಾಸ ಪಡತಾರೆ ಇವರ ನಡುವೆ ವೈವಾಹಿಕ ಜೀವನ ಸಂಬಂದ ಪ್ರಕರಣಗಳು ನಡೆದಿದ್ದವು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಈಗ ದಾವಾ ಆಸ್ತಿಯ ಸ್ವಾಧಿನತೆಯಲ್ಲಿ ಯಾರು ಇರುತ್ತಾರೆ ಎಂದರೆ ಸಾಕ್ಷಿಯು ಅಂಬಾದಾಸ ಮತ್ತು ಅವನ ಹೆಂಡತಿ ಸುಶೀಲಾಬಾಯಿ ಇರಬಹುದು ಎಂದು ನುಡಿಯುತ್ತಾರೆ.

ಮಹೇಂದ್ರ ಪಡಿಯಾರ ಇವನು ಅಂಬಾದಾಸ ಪಡತಾರೆ ಇವರ ಕಡೆಯಿಂದ ಮನೆಯನ್ನು ರೂ.6,20,000/- ಗಳಿಗೆ ಖರೀದಿ ಮಾಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಸಾಕ್ಷ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅಂಬಾದಾಸ ಪಡತಾರೆ ಇವರು ಮನೆಯನ್ನು ಮಹೇಂದ್ರ ಪಡಿಯಾರ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದು ಇರುತ್ತದೆ. ಸದರಿ ಖರೀದಿ ಪತ್ರದ ಮೇಲೆ ಮಹೇಂದ್ರ ಪಡಿಯಾರ ಇವರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತುಂಬಾ ವರ್ಷಗಳ ಹಿಂದೆ ಆಗಿದ್ದರಿಂದ ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಮತ್ತು ಮಹೇಂದ್ರ ತುಂಬಾ ವರ್ಷಗಳಿಂದ ಮುಧೋಳದಲ್ಲಿ ಇರುತ್ತಿದ್ದರಿಂದ ಅವನ ಪರಿಚಯ ನನಗೆ ಆಗಿ ನಂತರ ನಾವು ಸ್ನೇಹಿತರು ಆಗಿರುತ್ತೇವೆ. ಸದರಿ ಮಹೇಂದ್ರ ಇವರು ನನ್ನ ಸ್ನೇಹಿತ ಆಗಿರುವುದರಿಂದ ಅವರು ನನಗೆ ಕರೆದ ಮೇರೆಗೆ ನಾನು ಹೋಗಿ ಖರೀದಿ ಪತ್ರದ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಂಬಾದಾಸ ಪಡತಾರೆ ಮತ್ತು ಮಹೇಂದ್ರ ಇವರ ನಡುವೆ ಯಾವುದೇ ಆಸ್ತಿಯ ಖರೀದಿ ವ್ಯವಹಾರ ಆಗಿರುವುದಿಲ್ಲ ಮತ್ತು ಯಾವುದೇ ಹಣವನ್ನು ಅಂಬಾದಾಸ ಇವರಿಗೆ ಮಹೇಂದ್ರ ಇವರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚೆಕ್ಕ ಮುಖಾಂತರ ಹಣವನ್ನು ಮಹೇಂದ್ರ ಇವರು ಅಂಬಾದಾಸ ಪಡತಾರೆ ಇವರಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ಕ ಮುಖಾಂತರ ಹಣವನ್ನು ಕೊಟ್ಟಿರುತ್ತಾರೆ ಎಂದು ಖರೀದಿ ಪತ್ರದಲ್ಲಿ ನಮೂದಿಸಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಈ ದಾವೆಯ ಬಗ್ಗೆ ಮತ್ತು ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹಿತ ನಾನು ನನ್ನ ಸ್ನೇಹಿತನಾದ ಮಹೇಂದ್ರ ಪಡಿಯಾರ ಇವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**